ಹುಡುಗರನ್ನು ತುಳಿದುಕೊಂಡು ಓಡುತ್ತಿದ್ದರು.

ಈ ಭೀಭತ್ಸ ದೃಶ್ಯವನ್ನು ನೋಡಲಾರದೆ ಶಂಭು ಕೂಗುತ್ತಾ ಮಕ್ಕಳ ಕಡೆ ಧಾವಿಸಿದ. ಆದರೆ ಅವನನ್ನು ಅತ್ತಕಡೆ ಹೋಗಲು ಬಿಡದೆ ಗುಂಪು ಅವನನ್ನ ತಳ್ಳಿ ಮುನ್ನುಗ್ಗುತ್ತಿತ್ತು. ಜನಪ್ರವಾಹ ಮಕ್ಕಳಿಬ್ಬರ ಮೇಲೆ ಸತತವಾಗಿ ಪಾದಗಳ ಪ್ರಹಾರ ಮಾಡಿ ಮುಂದಕ್ಕೆ ಓಡುತ್ತಿತ್ತು. ಶಂಭು ಹುಚ್ಚನ ಹಾಗೆ ಕಿರುಚಿಕೊಂಡು ಮಕ್ಕಳ ಬಳಿ ಹೋಗಲು ಪ್ರಯತ್ನಿಸುತ್ತಿದ್ದ. ಮತ್ತೆ ಜನ ಪ್ರವಾಹ ಅವನನ್ನು ದೂರಕ್ಕೆ ಕಿತ್ತೆಸೆಯುತ್ತಿತ್ತು.

ಕ್ಷೀಣವಾಗಿ ದನಿಮಾಡಿ ಮೊದಲು ಪ್ರತಿಭಟಿಸಲೆತ್ನಿಸಿದ ಮಕ್ಕಳಿಬ್ಬರು ನಾಲ್ಕಾರು ಜನ ತುಳಿದ ನಂತರ ಪ್ರಜ್ಞೆ ತಪ್ಪಿ ಕೆಳಗೆ ಉರುಳಿದ್ದರು.

ಶಂಭು ತಲೆಗೂದಲನ್ನು ಕಿತ್ತುಕೊಂಡು ಕಿರುಚುತ್ತಿದ್ದ.

'ಸ್ವಾಮಿ... ಸ್ವಾಮಿ...'

★★★

ಸಾಯುವ ವೇಳೆಯಲ್ಲಿ ಆತ್ಮ ಯಾವ ಸಂಕಲ್ಪವನ್ನು ಮಾಡಿರುತ್ತದೊ ಅಂತಿಮ ಕ್ಷಣದಲ್ಲಿ ಯಾವ ಭಾವನೆಗೆ ವಶವಾಗಿರುತ್ತದೊ. ಅದು ಮುಖ್ಯ ಪ್ರಾಣದಲ್ಲಿ ಸ್ಥಿರಗೊಳ್ಳುತ್ತದೆ. ಅನಂತರ ಇಂದ್ರಿಯಗಳಿಂದ ಬಿಡುಗಡೆಯಾದ ಮೇಲೆ ಈ ಅಂತಿಮ ಸಂಕಲ್ಪಕ್ಕೆ ಅನುಸಾರವಾಗಿ ಬೇರೆ ಬೇರೆ ಲೋಕಗಳಲ್ಲಿ ಅಥವಾ ಯೋನಿಗಳಲ್ಲಿ ಸೇರಿಹೋಗುತ್ತದೆ.

★★★

ಕಾಳ್ಗಿಚ್ಚು ದೂರದಲ್ಲಿ ಅಲ್ಲೇ ನಿಂತಿತು. ಕಾಡಿನ ಅಂಚಿನವರೆಗೆ ಬಂದು ನಿಂತ ಬಡಬಾಗ್ನಿ, ಬಯಲನ್ನು ನೋಡಿ ನಿಂತಿತು. ಹತ್ತು ಚದರ ಮೈಲಿಯಷ್ಟು ವಿಸ್ತೀರ್ಣವಾದ ಕಾಡಿನಲ್ಲಿ ಮರಗಳು ಗಿಡಗಳು ಸುಟ್ಟು ಕರಕಾಗಿ, ಅನಾಥವಾಗಿ ನಿಂತಿದ್ದವು. ಬೆಂಕಿಗೆ ದಗ್ಧವಾದ ಪಶುಪಕ್ಷಿಗಳ ಅರೆ ಬೆಂದ ದೇಹಗಳು ವಿಚಿತ್ರವಾದ ಭಂಗಿಗಳಲ್ಲಿ ನೆಲದ ಮೇಲೆ ಬಿದ್ದಿದ್ದವು.

ಕಾಡಂಚಿನ ಬಯಲಿನಲ್ಲಿ, ಜನರ ಕಾಲ್ತುಳಿತಕ್ಕೆ ಜೀವ ಕಳೆದುಕೊಂಡ ಶಂಭುವಿನ ಮಕ್ಕಳಂತಹ ಎಳೆಯರ ಶವಗಳು ಹರಿದು ಹಂಚಿದ್ದವು. ಅಲ್ಲಲ್ಲಿ ವೃದ್ಧರ ದೇಹಗಳೂ ಧರಾಶಾಯಿಯಾಗಿದ್ದವು. ಬೆಂಕಿಯಿಂದ ತಪ್ಪಿಸಿಕೊಳ್ಳಲು ಗಟ್ಟಿದೇಹದ ಮಂದಿ ನಿರ್ಬಲರನ್ನು ತುಳಿದುಕೊಂಡು ಮುಂದಕ್ಕೆ ಓಡಿದ್ದರು. ಅವರ ಪದಾಘಾತಕ್ಕೆ ಸಿಕ್ಕಿದ್ದ ಎಳೆಯರ ದೇಹಗಳು ನಜ್ಜುಗುಜ್ಜಾಗಿದ್ದವು. ಕರುಳುಕಿತ್ತು ಹೊರಬಂದ. ಕೈಕಾಲುಗಳಿಂದ ಬೇರೆಯಾಗಿ ಅರೆ ಹರಿದ ಮಾಂಸಖಂಡಗಳ, ಗುರುತೇ ಅಳಿಸಿಹೋದ ಮುಖಗಳ ಎಳೆಯರ ಶವಗಳು ವಿಕಾರವಾಗಿ ಹರಡಿದ್ದವು.

ಮೂಡಲ ದಿಕ್ಕಿನಲ್ಲಿ ಎಂದಿನಂತೆ ಸೂರ್ಯ ಹುಟ್ಟಿದ. ಅವನ ಬೆಳಕು ಈ ಭೀಕರ ದೃಶ್ಯದ ಮೇಲೆ ಬೀಳುವ ವೇಳೆಗೆ, ಜನ ಮತ್ತೆ ಹಿಂದಿರುಗತೊಡಗಿದರು. ನೋಡಿಯೂ ನೋಡದವರಂತೆ ತಲೆಯನ್ನು ತಗ್ಗಿಸಿಕೊಂಡು ಮತ್ತೆ ಸ್ವಾಮಿಯ ಬೆಟ್ಟದ ಕಡೆ ಮುಖ ಮಾಡಿ ನಡೆಯತೊಡಗಿದರು.

ಶಂಭು ರಾತ್ರಿಯೆಲ್ಲಾ ಗೋಳಾಡಿದ್ದ. ಅವನ ದೇಹದ ಮೇಲೆ ತೀವ್ರವಾದ ಗಾಯಗಳಾಗಿದ್ದವು. ಆದರೆ ಅವನ ಮನಸ್ಸಿನ ಮೇಲೆ ಆಗಿದ್ದ ಆಘಾತದ ಮುಂದೆ ಅದು ಅವನಿಗೆ ಏನೂ ಅನ್ನಿಸಿರಲಿಲ್ಲ. ತನ್ನ ಕಂದಗಳಿಬ್ಬರೂ ಗುರುತೂ ಸಿಗದಂತೆ ನಿರ್ನಾಮವಾಗಿದ್ದನ್ನು ಕಣ್ಣಾರೆ ನೋಡಿದ ಅವನ ಹೃದಯ ನುಚ್ಚುನೂರಾಗುವುದರಲ್ಲಿತ್ತು.

ರಾತ್ರಿ ಕಾಳ್ಗಿಚ್ಚು ಧಗಧಗನೆ ಉರಿಯುತ್ತ ನಿಂತಿದ್ದಾಗ, 'ಬಾ, ಬಾ, ನನ್ನನ್ನು ಸುಡು' ಎಂದು